

ಗುರುಶಾಂತಯ್ಯ ಭಂಟನೂರು

ಕಲೆ: ಸಂತೋಷ್ ಸಸಿಹಿತ್ಲು

# ಸೈಕಲ್ ಸ್ನೇಹಿತ

ಅಪ್ಪ ತಂದ
ಚಂದ ಕಾರು
ಹೊಸತು ಹೊಸತು
ಥಳ ಥಳ

ಮಿನುಗು ಮಿಂಚು
ಥಳುಕು ಬಳಕು
ಹೊಳಪು ಥಳಪು
ಫಳ ಫಳ

ನವನವೀನ
ಬಣ್ಣ ಕಣ್ಣು
ನೆದರು ಖದರು
ರೂಪ ಕಾರು

ಸಣ್ಣ ಸದ್ದು
ಕೆಂಪು ತಂಪು
ಪಯಣ ಕಂಪು
ಇಂಪು ಜೋಂಪು

ಸಾಟಿ ಇಲ್ಲದ ಓಟ
ಬೆರಗು ಬೆಳಕು ನೋಟ
ಅಪ್ಪ ಅಮ್ಮಗೆ ಇಷ್ಟ
ನನಗದು ಕನಿಷ್ಠ

ಕಾರಿಗಿಂತ ಮೇಲು
ನನ್ನ ಸ್ಕೂಲ್ ಬಸ್ಸು
ಬಿಂಕ ಬಿನ್ನಾಣ
ಇಲ್ಲದ ವರ್ಚಸ್ಸು

ಬಣ್ಣ ಕಾರು
ಬೇಡ ನನಗೆ
ಸಣ್ಣ ಸೈಕಲ್
ಸಾಕು ಸಾಕು

ಗೆಳೆಯರೊಡನೆ
ಶಾಲೆ ಕಲಿಯಲು
ಸೈಕಲ್ ಸ್ನೇಹಿತ
ಬೇಕು ಬೇಕು



Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68